ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಸಿ.ಸಿ./137/2021–22

ದಿನಾಂಕ: 11.03.2022

## ಪ್ರಾರಂಭಿಕ ಪ್ರಮಾಣ ಪತ್ರ/ Commencement Certificate

**ವಿಷಯ :** ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಯಲಚನಾಯಕನಪುರ ಗ್ರಾಮದ ಸ.ನಂ. 9/1 ರಲ್ಲಿನ 03 ಎಕರೆ 13 1/4 ಗುಂಟೆ, ಸ.ನಂ. 9/2 ರಲ್ಲಿನ 01 ಎಕರೆ 30 ಗುಂಟೆ ಮತ್ತು ದೊಡ್ಡಹುಲ್ಲೂರು ಗ್ರಾಮದ ಸ.ನಂ. 129/3 ರಲ್ಲಿನ 10 1/2 ಗುಂಟೆ ಒಟ್ಟು 05 ಎಕರೆ 13 3/4 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಅನುಮೋದನೆಯಾದ ವಸತಿ ಉದ್ದೇಶದ ಅಭಿವೃದ್ಧಿ ಯೋಜನೆಯಲ್ಲಿನ ದೊಡ್ಡಹುಲ್ಲೂರು ಗ್ರಾಪಂಚಾಯಿತಿಯ ಖಾತೆ ಸಂಖ್ಯೆ: 11 ರ ಸ್ವತ್ತಿನ ಸಂಖ್ಯೆ: 150300401201200581 ಕಟ್ಟಡ ನಕ್ಷೆ (ವಸತಿ ಸಮುಚ್ಚಯ) ಗೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:**
1. ಈ ಕಛೇರಿಯ ಮಂಜೂರಾತಿ ಆದೇಶ ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ/22/2019–20, ದಿನಾಂಕ: 11.03.2020.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಹುಲ್ಲೂರು ಗ್ರಾಮಪಂಚಾಯಿತಿ ರವರ ಪತ್ರ ಸಂಖ್ಯೆ: ದೊ.ಗ್ರಾ.ಪಂ./123/2021–22, ದಿನಾಂಕ: 17.01.2022.
3. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 15.02.2022.
4. ಅರ್ಜಿದಾರರು ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ಕುರಿತು ಮನವಿ ದಿನಾಂಕ: 28.02.2022 ರೊಂದಿಗೆ State Bank of India, Mahadevapura, Bangalore, ರಲ್ಲಿನ ಡಿ.ಡಿ.ನಂ. 920866, ದಿನಾಂಕ: 28.02.2022 ರೂ. 64,06,000/-.

***

**ಪ್ರಸ್ತಾವನೆ**

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಈ ಪ್ರಾಧಿಕಾರದ ಆದೇಶದಲ್ಲಿ ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಯಲಚನಾಯಕನಪುರ ಗ್ರಾಮದ ಸ.ನಂ. 9/1 ರಲ್ಲಿನ 03 ಎಕರೆ 13 1/4 ಗುಂಟೆ, ಸ.ನಂ. 9/2 ರಲ್ಲಿನ 01 ಎಕರೆ 30 ಗುಂಟೆ ಮತ್ತು ದೊಡ್ಡಹುಲ್ಲೂರು ಗ್ರಾಮದ ಸ.ನಂ. 129/3 ರಲ್ಲಿನ 10 1/2 ಗುಂಟೆ ಒಟ್ಟು 05 ಎಕರೆ 13 3/4 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲಾಗಿದೆ. ಉಲ್ಲೇಖ (2) ರಲ್ಲಿ ಸದರಿ ಜಮೀನುಗಳಿಗೆ ಅನುಮೋದನೆಯಾದ ವಸತಿ ಅಭಿವೃದ್ಧಿ ಯೋಜನೆಯಲ್ಲಿ ವಸತಿ ಉಪಯೋಗದ ಬಹುಮಹಡಿ ಕಟ್ಟಡಕ್ಕೆ ಅಂದರೆ ಕಟ್ಟಡ–1 ರಲ್ಲಿ ಬೇಸ್‌ಮೆಂಟ್, ಸ್ಟಿಲ್ಟ್ ಮತ್ತು 10 ಅಂತಸ್ತಿನ (B+Stilt+10 Floors) ಕಟ್ಟಡದಲ್ಲಿ ಒಟ್ಟು 570 ವಸತಿ ಘಟಕಗಳನ್ನು ಹಾಗೂ ಕಟ್ಟಡ–2 ರಲ್ಲಿ ಬೇಸ್‌ಮೆಂಟ್, ಸ್ಟಿಲ್ಟ್ ಮತ್ತು 12 ಅಂತಸ್ತಿನ (B+Stilt+12 Floors) ಕಟ್ಟಡದಲ್ಲಿ ಒಟ್ಟು 360 ವಸತಿ ಘಟಕಗಳನ್ನು ಒಟ್ಟಾರೆ 02 ಕಟ್ಟಡಗಳಲ್ಲಿ ಒಟ್ಟು 930 ವಸತಿ ಘಟಕಗಳನ್ನು ಕಟ್ಟಲು ದೊಡ್ಡಹುಲ್ಲೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ಖಾತಾ ಸಂಖ್ಯೆ: 11 ರ ಸ್ವತ್ತಿನ ಸಂಖ್ಯೆ: 150300401201200581 ರಲ್ಲಿ ಕಟ್ಟಡ ನಕ್ಷೆಗೆ ಅನುಮೋದನೆ ಕೋರಿ ನಕ್ಷೆಗಳೊಂದಿಗೆ ಪ್ರಸ್ತಾವನೆಯನ್ನು

ಸಲ್ಲಿಸಲಾಗಿದೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಉಲ್ಲೇಖ (3) ರಲ್ಲಿ ಈಗಾಗಲೇ ನಿಗದಿತ ಶುಲ್ಕವನ್ನು ಪಾವತಿಸುವಂತೆ ತಿಳಿಸಲಾಗಿತ್ತು. ಅದರಂತೆ, ಉಲ್ಲೇಖ (4) ರಲ್ಲಿ ಶುಲ್ಕವನ್ನು ಅರ್ಜಿದಾರರು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.

ಸದರಿ ಜಮೀನುಗಳಿಗೆ / ನಿವೇಶನಕ್ಕೆ ಹಾಲಿ ರಾಜ್ಯ ಹೆದ್ದಾರಿ ಸಂಖ್ಯೆ: 35 ರ 30 ಮೀ. ಅಗಲದ ರಸ್ತೆಯನ್ನು 80 ಮೀ. ಅಗಲಕ್ಕೆ ವಿಸ್ತರಿಸಲು ಉದ್ದೇಶಿಸಲಾಗಿದೆ. ಸಲ್ಲಿಸಲಾದ ಕಟ್ಟಡ ನಕ್ಷೆಗಳು ಅನುಮೋದಿತ ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುತ್ತದೆ. ಆದ್ದರಿಂದ, ಮೇಲೆ ವಿವರಿಸಿರುವ ಅಂಶಗಳ ಮೇರೆಗೆ ಬಹುಮಹಡಿಗಳ ವಸತಿ ಕಟ್ಟಡ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡುವ ಸಂಬಂಧ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಹೊಯೋಪ್ರಾ/ಸಿ.ಸಿ./137/2021–22, ದಿನಾಂಕ : 11.03.2022**

ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಯಲಚನಾಯಕನಪುರ ಗ್ರಾಮದ ಸ.ನಂ. 9/1 ರಲ್ಲಿನ 03 ಎಕರೆ 13 1/4 ಗುಂಟೆ, ಸ.ನಂ. 9/2 ರಲ್ಲಿನ 01 ಎಕರೆ 30 ಗುಂಟೆ ಮತ್ತು ದೊಡ್ಡಹುಲ್ಲೂರು ಗ್ರಾಮದ ಸ.ನಂ. 129/3 ರಲ್ಲಿನ 10 1/2 ಗುಂಟೆ ಒಟ್ಟು 05 ಎಕರೆ 13 3/4 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಅನುಮೋದನೆಯಾದ ವಸತಿ ಉದ್ದೇಶದ ಅಭಿವೃದ್ಧಿ ಯೋಜನೆಯಲ್ಲಿನ ದೊಡ್ಡಹುಲ್ಲೂರು ಗ್ರಾಮಪಂಚಾಯಿತಿಯ ಖಾತೆ ಸಂಖ್ಯೆ: 11 ರ ಸ್ವತ್ತಿನ ಸಂಖ್ಯೆ: 150300401201200581 ರ ಕಟ್ಟಡ ನಕ್ಷೆಗೆ ಅಂದರೆ ಕಟ್ಟಡ–1 ರಲ್ಲಿ ಬೇಸ್‌ಮೆಂಟ್, ಸ್ಟಿಲ್ಟ್ ಮತ್ತು 10 ಅಂತಸ್ತಿನ (B+Stlit+10 Floors) ಕಟ್ಟಡದಲ್ಲಿ ಒಟ್ಟು 570 ವಸತಿ ಘಟಕಗಳನ್ನು ಹಾಗೂ ಕಟ್ಟಡ–2 ರಲ್ಲಿ ಬೇಸ್‌ಮೆಂಟ್, ಸ್ಟಿಲ್ಟ್ ಮತ್ತು 12 ಅಂತಸ್ತಿನ (B+Stlit+12 Floors) ಕಟ್ಟಡದಲ್ಲಿ ಒಟ್ಟು 360 ವಸತಿ ಘಟಕಗಳನ್ನು ಒಟ್ಟಾರೆ 02 ಕಟ್ಟಡಗಳಲ್ಲಿ ಒಟ್ಟು 930 ವಸತಿ ಘಟಕಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 15 ರನ್ವಯ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ.

**ಷರತ್ತುಗಳು:**

1. ಈಗ ನೀಡಿರುವ ಕಟ್ಟಡ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಅಂದರೆ ದಿನಾಂಕ: 11.03.2022 ರಿಂದ ದಿನಾಂಕ: 10.03.2024 ರವರೆಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಕಟ್ಟಡ ಅಭಿವೃದ್ಧಿ ಕಾರ್ಯ ಪೂರ್ಣಗೊಳ್ಳದಿದ್ದಲ್ಲಿ, ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2. ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017 ಅಡಿಯಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ "ಸದರಿ ಅನುಮೋದಿತ ವಸತಿ ಕಟ್ಟಡವನ್ನು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲು ಹಾಗೂ ನೋಂದಣಿ ಮಾಡಿಕೊಂಡ ನಂತರವೇ ಸದರಿ ಅನುಮೋದಿತ ವಸತಿ ಕಟ್ಟಡ ನಿರ್ಮಾಣದ ವ್ಯವಹಾರದ ಕುರಿತು ಜಾಹೀರಾತು ನೀಡಬಹುದು ಹಾಗೂ ವಸತಿ ಕಟ್ಟಡದಲ್ಲಿನ ಘಟಕಗಳನ್ನು ಮಾರಾಟ ಸಂಬಂಧ ಮುಂಗಡ ಒಪ್ಪಂದ ಕರಾರನ್ನು ಮಾಡಿಕೊಳ್ಳಬಹುದು.
3. ಅನುಮೋದಿತ ವಸತಿ ಅಭಿವೃದ್ಧಿ ಯೋಜನೆಯಲ್ಲಿ ಪ್ರಸ್ತಾವಿಸಲಾದ ಕಟ್ಟಡ ನಕ್ಷೆಗೆ ಅನುಗುಣವಾಗಿ ಹಾಗೂ ಈ ಪ್ರಾಧಿಕಾರದಿಂದ ನೀಡಲಾದ ಅನುಮೋದನೆಯಂತೆ ಕಟ್ಟಡವನ್ನು ನಿರ್ಮಿಸತಕ್ಕದ್ದು. ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ಈ ಕಛೇರಿಗೆ ಮಾಹಿತಿ ನೀಡತಕ್ಕದ್ದು.
4. ನಿವೇಶನದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಾದ ದೊಡ್ಡಹುಲ್ಲೂರು ಗ್ರಾಮಪಂಚಾಯಿತಿ ವತಿಯಿಂದ ಪರವಾನಗಿ ಪಡೆಯತಕ್ಕದ್ದು.

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಸಿ.ಸಿ./137/2021–22 ದಿನಾಂಕ: 11.03.2022

5. **ಸದರಿ ಜಮೀನಿನಲ್ಲಿ ವಸತಿ ಕಟ್ಟಡ ಕಾಮಗಾರಿ ಕೈಗೊಳ್ಳುವ ಮೊದಲು ಮತ್ತು ನಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರ ಪತ್ರ ಸಂಖ್ಯೆ: CTE-330249, PCB ID 119205, ದಿನಾಂಕ: 09.03.2022 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.**
6. ಸದರಿ ಜಮೀನಿನಲ್ಲಿ ಯಾವುದೇ ಕಾಮಗಾರಿ ಕೈಗೊಳ್ಳುವ ಮೊದಲು ಭಾರತೀಯ ವಾಯುಯಾನ ಪ್ರಾಧಿಕಾರ ರವರ ಪತ್ರ ಸಂಖ್ಯೆ: BIAL/SOUTH/B/081321/569667, ದಿನಾಂಕ: 02.09.2021 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕದ್ದು.
7. ಸದರಿ ಜಮೀನಿನಲ್ಲಿ ಯಾವುದೇ ಕಾಮಗಾರಿ ಕೈಗೊಳ್ಳುವ ಮೊದಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಲಿ., ರವರ ಪತ್ರ ಸಂಖ್ಯೆ: ಮುಇಂ/ಬೆಂಗ್ರಾಕ್ಷೇವ/ಅಇಂ(ವಿ)/ಸಕಾಇಂ–2/19–20/9138–42, ದಿನಾಂಕ: 20.03.2020 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕದ್ದು.
8. ಸದರಿ ಜಮೀನಿನಲ್ಲಿ ಯಾವುದೇ ಕಾಮಗಾರಿ ಕೈಗೊಳ್ಳುವ ಮೊದಲು ಭಾರತೀಯ ಸಂಚಾರ ನಿಗಮ ಲಿಮಿಟೆಡ್ (BSNL) ರವರ ಪತ್ರ ಸಂಖ್ಯೆ: DGM(CM)BGTD/NOC for High rise/2021-22/43, ದಿನಾಂಕ: 06.09.2021 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕದ್ದು.
9. ಸದರಿ ಜಮೀನಿನಲ್ಲಿ ಯಾವುದೇ ಕಾಮಗಾರಿ ಕೈಗೊಳ್ಳುವ ಮೊದಲು State Level Environment Impact Assessment Authority-Karnataka ರವರ ಪತ್ರ ಸಂಖ್ಯೆ: SEIAA 101 CON 2021, ದಿನಾಂಕ: 28.12.2021 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕದ್ದು ಹಾಗೂ ಕಟ್ಟಡವನ್ನು ಕಟ್ಟುವ ಮುನ್ನ ಪರಿಷ್ಕೃತ ಆದೇಶ ಪಡೆಯುವ ನಿಬಂಧನೆಗೊಳಪಟ್ಟಿರುತ್ತದೆ.
10. Director General of Police & Director General, Karnataka State Fire & Emergency Services ರವರ ನಿರಾಕ್ಷೇಪಣಾ ಪತ್ರ ಸಂಖ್ಯೆ: KSFES/GBC(1)/402, ದಿನಾಂಕ: 03.01.2022 ರಲ್ಲಿ ವಿಧಿಸಲಾದ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.
11. ಸದರಿ ಯೋಜನೆಗೆ ಕುಡಿಯುವ ನೀರು ಪೂರೈಕೆ ಬಗ್ಗೆ ದೊಡ್ಡಹುಲ್ಲೂರು ಗ್ರಾಮ ಪಂಚಾಯಿತಿ ಪತ್ರ ಸಂಖ್ಯೆ: 22/2021–22, ದಿನಾಂಕ: 26.07.2021 ರಂದು ನೀಡಿರುವ ಪತ್ರದಂತೆ ಅಗತ್ಯ ಕ್ರಮ ಜರುಗಿಸಿ ನೀರು ಪೂರೈಕೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವುದು ಹಾಗೂ ಇತರೆ ಮೂಲಗಳಿಂದಲೂ ನೀರು ಪೂರೈಕೆಗೆ ಕ್ರಮ ಜರುಗಿಸುವುದು. **ಸದರಿ ಸ್ಥಳೀಯ ಸಂಸ್ಥೆಯಿಂದ ಪ್ರಸ್ತಾಪಿತ ವಸತಿ ಕಟ್ಟಡಕ್ಕೆ ನೀರನ್ನು ಒದಗಿಸದೇ ಇದ್ದಲ್ಲಿ, ಈ ಬಗ್ಗೆ ಅಭಿವೃದ್ಧಿದಾರರು / ಜಮೀನಿನ ಮಾಲೀಕರು ತಮ್ಮ ಸ್ವಂತ ಖರ್ಚಿನಲ್ಲಿ ಕುಡಿಯುವ ನೀರು ಪೂರೈಕೆಗೆ ಅಗತ್ಯ ಕ್ರಮವನ್ನು ಕೈಗೊಳ್ಳುವ ನಿಬಂಧನೆಗೆ ಒಳಪಟ್ಟಿರುತ್ತದೆ.**
12. ಸದರಿ ಜಮೀನಿನಲ್ಲಿ ಪ್ರಸ್ತಾಪಿಸಿರುವ ಕಟ್ಟಡಗಳ ನಿರ್ಮಾಣ ಸಂಬಂಧ ದಿನಾಂಕ: 03.03.2022 ರಂದು ಸಲ್ಲಿಸಿರುವ ಶ್ರೀ Vaibhav Kumar J.Galagali., Bangalore ರವರ ಸ್ಥಿರತೆ ಪ್ರಮಾಣ ಪತ್ರ (Structural Stability Certificate) ದಲ್ಲಿ ತಿಳಿಸಿರುವಂತೆ ಅವರ ಮೇಲ್ವಿಚಾರಣೆಯಲ್ಲಿ ಹಾಗೂ ನಿಯಮಗಳಂತೆ ಕಟ್ಟಡಗಳನ್ನು ನಿರ್ಮಿಸತಕ್ಕದ್ದು ಹಾಗೂ ಸದರಿ ಕಟ್ಟಡದ ಗುಣಮಟ್ಟಕ್ಕೆ ಅರ್ಜಿದಾರರು/ಅಭಿವೃದ್ಧಿದಾರರು ಹಾಗೂ Structural Stability Certificate ನೀಡಿದ ಇಂಜಿನಿಯರ್ ರವರು ಹೊಣೆಗಾರರಾಗಿರುತ್ತಾರೆ. ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

13. ಇತರೇ ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಗಳಲ್ಲಿನ ನಿಬಂಧನೆ/ಷರತ್ತು ಹಾಗೂ ಇತರೇ ಅಂಶಗಳನ್ನು ತಪ್ಪದೇ ಪಾಲಿಸತಕ್ಕದ್ದು.
14. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಕಟ್ಟಡ ನಕ್ಷೆಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
15. ಈ ನಿವೇಶನದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಹಾಗೂ ಹೊಸ ಸಸ್ಯಗಳನ್ನು ಬೆಳೆಸುವುದು.
16. ಸೋಲಾರ್ ವಾಟರ್ ಹೀಟರ್ ಅನ್ನು ಕಟ್ಟಡಗಳಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.
17. ಸದರಿ ನಿವೇಶನದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
18. ಕಟ್ಟಡದ ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ಬಳಸುವುದನ್ನು ನಿಷೇಧಿಸಲಾಗಿದೆ ಹಾಗೂ ಕಾರ್ಮಿಕ ಇಲಾಖೆಯ ಆದೇಶಾನುಸಾರ ವಿಧಿಸಿರುವ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು. ಮತ್ತು ಕಟ್ಟಡ ಕಾಮಗಾರಿ ಕಾರ್ಮಿಕರಿಗೆ ಕಟ್ಟಡ ಕಾಮಗಾರಿಯ ಸಂದರ್ಭದಲ್ಲಿ ಅಗತ್ಯ ಸೌಕರ್ಯಗಳನ್ನು ಒದಗಿಸತಕ್ಕದ್ದು.
19. ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಶೇಖರಣೆ ಮಾಡಬಾರದು.
20. ಕಟ್ಟಡ ನಡು ಜಾಗ ಪ್ರದೇಶದ ಅಂಚಿನಲ್ಲಿ ಗಿಡ ಮರಗಳನ್ನು ಬೆಳೆಸತಕ್ಕದ್ದು.
21. ಒಂದು ಅನುಮೋದಿತ ಕಟ್ಟಡ ನಕ್ಷೆಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಪ್ರದರ್ಶಿಸತಕ್ಕದ್ದು.
22. ಸದರಿ ಪ್ರಸ್ತಾಪಿತ ಜಮೀನಿನಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರ/ಇತರೆ ಸರ್ಕಾರಿ ಇಲಾಖೆಗಳ ಜಮೀನುಗಳು/ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಹಾಗೂ ಖರಾಬು ಜಮೀನುಗಳ ಅಳತೆಗಳು ಮತ್ತು ಅವುಗಳ ವಾಸ್ತವಿಕ ಸ್ಥಳಗಳ ವ್ಯತ್ಯಾಸ ಕಂಡುಬಂದಂತಹ ಸಂದರ್ಭದಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರವು ಅನುಮೋದಿತ ವಸತಿ ಉದ್ದೇಶದ ಅಭಿವೃದ್ಧಿ ಯೋಜನಾ ನಕ್ಷೆಯನ್ನು/ಕಟ್ಟಡ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಸಂಪೂರ್ಣ ಅಧಿಕಾರ ಹೊಂದಿರುತ್ತದೆ.
23. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.
24. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
25. ಸದರಿ ಕಟ್ಟಡದಲ್ಲಿ ವಿಕಲಚೇತನ ಸ್ನೇಹಿ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು.
26. ನೈಸರ್ಗಿಕವಾಗಿ ಹರಿಯುವ ನದಿ/ ಹಳ್ಳ /ಕೆರೆ ಮುಂತಾದವುಗಳಿಗೆ ಯಾವುದೇ ಮಲಿನ ನೀರನ್ನು ಬಿಡಬಾರದು.
27. ಶೌಚಕ್ಕೆ ಬಳಸುವ ತ್ಯಾಜ್ಯ ನೀರನ್ನು "ನಗರ ಮರುಬಳಕೆ ಮಾನದಂಡ" ದಂತೆ ಬಳಸುವುದು.
28. ಸಂಸ್ಕರಿತ ತ್ಯಾಜ್ಯ ನೀರನ್ನು ನಿವೇಶನದಲ್ಲಿನ ಉದ್ಯಾನವನ ಮತ್ತು ಶೌಚಕ್ಕೆ ಬಳಸುವುದು.
29. ಎಸ್.ಟಿ.ಪಿ. ಯಲ್ಲಿ ವಾಸನೆ ನಿಯಂತ್ರಿಸುವ ವ್ಯವಸ್ಥೆಯನ್ನು ಅಳವಡಿಸುವುದು.
30. ಕಟ್ಟಡ ಕಾರ್ಮಿಕರು ಆದಷ್ಟು ಕಡಿಮೆ ಹೊಗೆ ಹೊರಸೂಸುವ ಉತ್ತಮ ತಾಂತ್ರಿಕತೆಯನ್ನು ಬಳಸುವುದು.
31. ಸರ್ಕಾರದ ನಿರ್ದೇಶನದ ಮೇರೆಗೆ ಇನ್ನಾವುದೇ ಶುಲ್ಕಗಳನ್ನು ತುಂಬಲು ಪ್ರಾಧಿಕಾರವು ಸೂಚನೆ ನೀಡಿದಲ್ಲಿ ಅರ್ಜಿದಾರರು ಅಂತಹ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು.
32. ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ವಿಧಿ 15 ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಸಿ.ಸಿ./137/2021–22 ದಿನಾಂಕ: 11.03.2022

33. ಪ್ರಾಧಿಕಾರವು ವಿಧಿಸುವ ಇನ್ನಾವುದೇ ಷರತ್ತುಗಳಿಗೆ ಬದ್ಧವಾಗಿರತಕ್ಕದ್ದು.
34. ಮೇಲ್ಕಂಡ ಯಾವುದೇ ಷರತ್ತುಗಳನ್ನು ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.
35. **ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ವಯ ಈ ಅನುಮತಿಯನ್ನು ನೀಡಲಾಗಿದ್ದು, ವಸತಿ ಕಟ್ಟಡ ನಕ್ಷೆಗೆ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಸತಿ ಕಟ್ಟಡ ನಕ್ಷೆಗೆ ನೀಡಿರುವ ಅಂಗೀಕಾರ ತಾನಾಗಿಯೇ ರದ್ದುಗೊಳ್ಳುತ್ತದೆ.**

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

<u>ಪ್ರತಿಗಳನ್ನು :</u>

1. ಕಾರ್ಯದರ್ಶಿಗಳು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ನಂ. 1/14, 2ನೇ ಮಹಡಿ, ಸಿಲ್ವರ್ ಜ್ಯುಬಿಲಿ ಬ್ಲಾಕ್, ಯೂನಿಟಿ ಬಿಲ್ಡಿಂಗ್, ಸಿ.ಎಸ್.ಐ. ಕಾಂಪೌಂಡ್, 3ನೇ ಅಡ್ಡ ರಸ್ತೆ, ಮಿಷನ್ ರಸ್ತೆ, ಬೆಂಗಳೂರು–27 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಹುಲ್ಲೂರು ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು. } ಇವರಿಗೆ ಕಟ್ಟಡ ನಕ್ಷೆಯ ನಾಲ್ಕು ಪ್ರತಿಗಳೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಮೆ॥ ಸೌವರ್ಣಿಕ ಪ್ರಾಜೆಕ್ಟ್ಸ್ & ಇನ್‌ಫ್ರಾಸ್ಟ್ರಕ್ಚರ್ ಪ್ರೈ ಲಿ., ನಂ. 750, 1ನೇ ಮುಖ್ಯ ರಸ್ತೆ, ಸಿ ಬ್ಲಾಕ್, ಎ.ಇ.ಸಿ.ಎಸ್. ಬಡಾವಣೆ, ಕುಂದಲಹಳ್ಳಿ, ಬೆಂಗಳೂರು–560 037 ರವರ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.